







# ಹೀಗೊಬ್ಬ ಸಾವಯವ ಕೃಷಿಕ

ಬೆಳೆದ ಬೆಳೆಗೆ ಮಾರುಕಟ್ಟೆಯನ್ನು ಹುಡುಕಿಕೊಂಡು ಹೋಗುವ ಪ್ರಮೇಯ ಇವರಿಗಿಲ್ಲ. ಹತ್ತಿರದ ಪೇಟೆ ಅಂಗಡಿಗಳು, ಸುತ್ತಮುತ್ತಲಿನ ಊರವರೇ ಇವರ ಖಾಯಂ ಗಿರಾಕಿಗಳು.

■ ಧರ್ಮಾನಂದ ಶಿರ್ವ
ಚಿತ್ರಗಳು: ಸುಹಾಸ ಶ್ರೀನಾಥ್

ಮೂರು ಎಕರೆ ಜಮೀನಿನಲ್ಲಿ ಮಳೆ ಆಧಾರಿತ ಭತ್ತವನ್ನಷ್ಟೇ ಬೆಳೆಸಿ ಬದುಕು ಕಟ್ಟಿಕೊಂಡಿದ್ದ ಉಡುಪಿ ತಾಲೂಕಿನ ಶಿರ್ವ ಗ್ರಾಮದ ರಾಘವೇಂದ್ರ ನಾಯಕ್ ಈಗ ಆಧುನಿಕ ಕೃಷಿ ಪದ್ಧತಿಗೆ ತೆರೆದುಕೊಂಡಿದ್ದಾರೆ. ಮಿಶ್ರಬೆಳೆಗಳ ಜೊತೆ ಗುರುತಿಸಿಕೊಂಡಿದ್ದಾರೆ.

ಹನಿ ನೀರಾವರಿ, ಸರಕಾರದ ವತಿಯಿಂದ ದೊರೆತ ಕೊಳವೆ–ಬಾವಿಯಿಂದಾಗಿ ಇವರ ಕೃಷಿ ಹೆಚ್ಚಿನ ಪ್ರಗತಿ ಕಂಡಿದೆ. ನೀರಿನ ಆಸರೆಯಿಂದ ಮನೆಯ ಸುತ್ತ ಸದಾ ಹಸಿರು. ಭತ್ತದ ಕೊಯ್ಲು ಮುಗಿಯುತ್ತಿದ್ದಂತೆಯೇ ಗದ್ದೆಯ ತುಂಬ ತರಕಾರಿಗಳ ನಾಟಿ ಶುರುವಾಗುತ್ತದೆ. ಉಡುಪಿ ಗುಳ್ಳ, ಅಲಸಂದೆ, ಬೆಂಡೆ, ಪಡುವಲ, ತೊಂಡೆ, ಸೋರೆ, ಹೀರೆ, ಮುಳ್ಳುಸೌತೆ, ಬೂದುಕುಂಬಳ, ಮೊಗೆಕಾಯಿ, ಬಸಳೆ, ಹಸಿರು, ಕೆಂಪು ಹರಿವೆ.. ತರಕಾರಿಗಳ ಸಾಲು ಸಾಲು ಸಾಗುತ್ತದೆ. ಇವೆಲ್ಲವೂ ಸಾವಯವಮಯ.

ಒತ್ತಟ್ಟಿಗೆ ತೆಂಗು, ಕಂಗು ನಡುವೆ ಕರಿಮೆಣಸಿನ ಮಿಶ್ರಬೆಳೆ. ಪಕ್ಕದಲ್ಲಿಯೇ ಮೈತುಂಬಿ ನಿಂತ ಬಾಳೆ. ಮತ್ತೊಂದೆಡೆ ವರ್ಷವಿಡೀ